ಕಲಂ 302 ಸಿ.ಆರ್.ಪಿ.ಸಿ. ಅರ್ಜಿಯ ಮೇಲೆ ಆದ ದಿನಾಂಕಃ 19-12-2022 ರ ಆದೇಶದ ಮೇರೆಗೆ ಮೂಲ ದೂರುದಾರರ ವಾರಸುದಾರರನ್ನು ಸಾಕ್ಷಿ ಎಂದು ಕರೆಯಿಸಲಾಯಿತು.

**ದಿನಾಂಕಃ 18-12-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ : ಶ್ರೀ ಎಸ್.ಎಸ್.ಜೆ., ದೂರುದಾರರ ಪರ ವಕೀಲರಿಂದಃ**

ಈ ಮೊದಲಿನ ಮುಕ್ತಿಯಾರದಾರ ನೌಕರಿ ಬಿಟ್ಟು ಹೋಗಿರುವುದರಿಂದ ಫಿರ್ಯಾದಿ ಸಂಸ್ಥೆಯವರು ನನಗೆ ಈ ಪ್ರಕರಣ ನಡೆಸಲು ಅಧಿಕಾರ ಪತ್ರವನ್ನು ನೀಡಿರುತ್ತಾರೆ. ಅದರ ಆಧಾರದ ಮೇಲೆ ನಾನು ಈ ದಿನ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿರುತ್ತವೆ, ನಾನೇ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ನನ್ನ ಫಿರ್ಯಾದಿಗೆ ಪೂರಕವಾಗಿಃ

1) ಆರೋಪಿ ನೀಡಿದ ಚೆಕ್ ನಂಬರ 286806 ಹಾಜರಪಡಿಸಿದ್ದು ಅದನ್ನು ನಿಪಿ-1 ಅಂತಾ ಆರೋಪಿಯ ಸಹಿಯನ್ನು ನಿಪಿ-1(ಎ) ಅಂತಾ ಗುರುತಿಸಲಾಯಿತು.
2) ಸದರಿ ಚೆಕ್‌ನ್ನು Funds Insufficient ಎಂಬ ಕಾರಣಕ್ಕೆ ಮರಳಿ ಬಂದ ಬಗ್ಗೆ ಬ್ಯಾಂಕಿನವರು ನೀಡಿದ ಮೇಮೋ ಹಾಜರಪಡಿಸಿದ್ದು ಅದನ್ನು ನಿಪಿ-2 ಅಂತಾ ಗುರುತಿಸಲಾಯಿತು.
3) ಆರೋಪಿಗೆ ನೀಡಿದ ದಿನಾಂಕಃ 30-11-2012 ರ ನೋಟಿಸ್‌ನ ಕಛೇರಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-3 ಅಂತಾ ಗುರುತಿಸಲಾಯಿತು.
4) ಒಂದು ಅಂಚೆ ರಸೀದಿಯನ್ನು ಹಾಜರಪಡಿಸಿದ್ದು ಅದನ್ನು ನಿಪಿ-4 ಅಂತಾ ಗುರುತಿಸಲಾಯಿತು.

5) ಆರೋಪಿಗೆ ಕಳುಹಿಸಿದ ನೋಟಿಸ್ ಮರಳಿ ಬಂದ ಬಗ್ಗೆ ಅಂಚೆ ಲಕೋಟೆಯನ್ನು ಹಾಜರಪಡಿಸಿದ್ದು ಅದನ್ನು ನಿಪಿ-5 ಎಂದು ಹಾಗೂ ಅದರಲ್ಲಿರುವ ನೋಟಿಸನ್ನು ಈಗ ತೆರೆದ ನ್ಯಾಯಾಲಯದಲ್ಲಿ ಬಿಚ್ಚಿ ತೆಗೆಯಲಾಯಿತು ಅದನ್ನು ನಿಪಿ-5(ಎ) ಅಂತಾ ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ದೂರುದಾರರ ಪರ ವಕೀಲರು ಸಮಯ ಕೋರಿದ್ದರಿಂದ, ಸಮಯ ನೀಡಿ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**-ಸಹಿ- 18-12-2023**

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.